**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ವಿರಾಜಪೇಟೆ.**

**ಸಿ.ಸಿ.ನಂ.579/2023**

**ಪಿರ್ಯಾದಿಃ** ಸಣ್ಣ ಸ್ವಾಮಿ.ಎ
ತಂದೆಃ ಅಣ್ಣಯ್ಯ.ಯು
ಪ್ರಾಯ 40 ವರ್ಷ
ವಾಸಃ ಮೈಲಾಪುರ
ಬಾಡಗ ಬಾಣಂಗಾಲ ಗ್ರಾಮ
ಮಾಲ್ದಾರೆ ಅಂಚೆ
ವಿರಾಜಪೇಟೆ ತಾಲ್ಲೂಕು.

**ವಿರುದ್ಧ**

**ಆರೋಪಿಃ** ನಿತಿನ್.ಆರ್.ಎನ್
ತಂದೆಃ ರಾಚಯ್ಯ ಹೆಚ್.ಆರ್
ಪ್ರಾಯ 30 ವರ್ಷ
ವಾಸಃ ಗುಡ್ ಶೆಪರ್ಡ್ ಸ್ಕೂಲ್
ಅಮ್ಮತ್ತಿ, ವಿರಾಜಪೇಟೆ ತಾಲ್ಲೂಕು.

**ದಂಡ ಸಂಹಿತೆ ಪ್ರಕ್ರಿಯೆ ಕಲಂ 351ರಡಿಯಲ್ಲಿ ಆರೋಪಿತನ ಹೇಳಿಕೆ**

**ಪ್ರ.1 ಃ ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆಯಾದ ಎಲ್ಲಾ ಸಾಕ್ಷ್ಯಗಳನ್ನು ಕೇಳಿರುವಿರಾ?**

ಉ ಃ yes

**ಪ್ರ.2 ಃ ಪ್ರಾಸಾ-1 ಸಣ್ಣಸ್ವಾಮಿ ಎ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ ಆರೋಪಿಯಾದ ನೀವು, ನಿಮ್ಮ ತಾಯಿ ತಂದೆ ಮತ್ತು ಪಿರ್ಯಾದಿಯವರು ಪರಿಚಯಸ್ಥರಾಗಿರುತ್ತೀರ. ಆರೋಪಿಯಾದ ನೀವು ಪಿರ್ಯಾದಿಯವರಿಂದ ಅಂತರ್ ಜಾಲ ಸೇವಾ ವ್ಯಾಪಾರಕ್ಕಾಗಿ

ರೂ.4,60,000/- ಸಾಲವನ್ನು ದಿನಾಂಕಃ 01.04.2021 ರಂದು ಪಡೆದುಕೊಂಡಿರುತ್ತೀರಿ. ಈ ಕುರಿತು ನಿಮ್ಮ ಮಧ್ಯೆ ದಿನಾಂಕ 15-09-2022 ರಂದು ಒಂದು ಒಪ್ಪಂದ ಆಗಿರುತ್ತದೆ. ಸದರಿ ಒಪ್ಪಂದದಂತೆ ಆರೋಪಿಯಾದ ನೀವು ಪಿರ್ಯಾದುದಾರರಿಗೆ ದಿನಾಂಕ 01-12-2022 ಕ್ಕಿಂತ ಪೂರ್ವದಲ್ಲಿ ಹಣವನ್ನು ಮರುಪಾವತಿ ಮಾಡಲು ಒಪ್ಪಿರುತ್ತೀರಿ. ಒಂದು ವೇಳೆ ಸದರಿ ಸಾಲದ ಹಣವನ್ನು ಮರುಪಾವತಿ ಮಾಡದಿದ್ದಲ್ಲಿ ಆರೋಪಿಯಾದ ನಿಮಗೆ ಸೇರಿದ ಸರ್ವೆ ನಂ.1/10 ರಲ್ಲಿರುವ 3 ಸೆಂಟ್ಸ್ ಜಾಗವನ್ನು ಪಿರ್ಯಾದಿಯವರ ಹೆಸರಿಗೆ ಶುದ್ಧ ಕ್ರಯ ಪತ್ರ ನೊಂದಣಿ ಮಾಡಲು ಒಪ್ಪಿಕೊಂಡಿರುತ್ತೀರಿ. ನಂತರ ಪಿರ್ಯಾದಾರರು ಹಣವನ್ನು ಮರುಪಾವತಿ ಮಾಡಿ ಎಂದು ಕೇಳಿದಾಗ, ಆರೋಪಿಯಾದ ನೀವು State Bank of India, ವಿರಾಜಪೇಟೆ ಶಾಖೆಗೆ ಸೇರಿದ ಚೆಕ್ ನಂ 007801, ದಿನಾಂಕಃ03.05.2023 ರಂದು ರೂ.4,60,000/-ಗಳ ಚೆಕ್‌ನ್ನು ನೀಡಿದ್ದು, ಸದರಿ ಚೆಕ್ಕನ್ನು ಪ್ರಾ.ಸಾ.1 ರವರು ಬ್ಯಾಂಕ್ ಖಾತೆ ಆದ ಬ್ಯಾಂಕ್ ಆಫ್ ಬರೋಡ, ವಿರಾಜಪೇಟೆ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ದಿಃ05.05.2023 ರಂದು ಹಿಂತಿರುಗಿ ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉ – False

**ಪ್ರಶ್ನೆ-3** ಪ್ರಾ.ಸಾ-1 ರವರು ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ ವಕೀಲರ ಮೂಲಕ ನಿಮಗೆ ದಿನಾಂಕಃ13.05.2023 ರಂದು ನೋಟೀಸ್ ಅನ್ನು ಕಳುಹಿಸಿದ್ದು ಅದು ನಿಮಗೆ ಜಾರಿಯಾಗಿದ್ದರೂ ಸಹ ನೀವು ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಮತ್ತು ಚೆಕ್ ಹಣವನ್ನು ವಾಪಸ್

ಕೊಡಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉ - False

**ಪ್ರಶ್ನೆ -4** ಈ ಪ್ರಕರಣದ ಬಗ್ಗೆ ಬೇರೇನಾದರೂ ಹೇಳುವುದಿದೆಯೆ?

ಉ – It is submitted that accused has received totall amount of Rs.2,00,000/- in cash from complainant. But, he has paid entire amount with interest in cash total amount of Rs.3,10,000/-. I have issued blanks cheque without signature. My signatures has been forged by complainant and failed false case.

**ಪ್ರಶ್ನೆ-5** ನಿಮ್ಮ ಪರವಾಗಿ ಮೌಖಿಕ ಸಾಕ್ಷ್ಯ ಅಥವಾ ದಾಖಲಾತಿಗಳನ್ನು ಹಾಜರುಪಡಿಸಲು ಬಯಸುವಿರಾ?

ಉತ್ತರ – yes. Accused submits that he has defence evidence.

(ಈ ಹೆಚ್ಚುವರಿ ಹೇಳಿಕೆಯನ್ನು ದಿನಾಂಕ : 03ನೇ ಜನವರಿ 2026ರಂದು ಆರೋಪಿಗೆ ಓದಿ ಹೇಳಿ ವಿವರಿಸಿ ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)

**ದಿನಾಂಕ: 03.01.2026.** sd/-

ಸ್ಥಳ:**ವಿರಾಜಪೇಟೆ** **ಪ್ರದೀಪ ಪೊತದಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ವಿರಾಜಪೇಟೆ.**